# ಶ್ರೀರಾಮಕೃಷ್ಣ ಮತ್ತು ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ ಧರ್ಮಸಮನ್ವಯ

**ಸ್ವಾಮಿ ಭಜನಾನಂದ**

ಧರ್ಮದ ಬಗೆಗಿನ ಪ್ರಮುಖ ಸಮಸ್ಯೆಗಳಲ್ಲಿ ಒಂದೆಂದರೆ, ಧರ್ಮಗಳ ಅನೇಕತೆ ಅಥವಾ ವೈವಿಧ್ಯತೆ. ಅನೇಕ ಧರ್ಮಗಳಿರುವುದಷ್ಟೆ ಅಲ್ಲ; ಅವುಗಳು ಒಂದರಿಂದ ಮತ್ತೊಂದು ಅನೇಕ ವಿಧಗಳಲ್ಲಿ ಭಿನ್ನವಾಗಿವೆ. ಅಷ್ಟೇ ಅಲ್ಲ, ಪ್ರತಿಯೊಂದೂ ಜೀವನಕ್ಕೆ ಸರಿಯಾದ ಮಾರ್ಗವನ್ನು ತೋರಿಸುವುದಾಗಿ ಹೇಳಿಕೊಳ್ಳುತ್ತದೆ; ಪ್ರತಿಯೊಂದೂ ತಾನೇ ಅಸದೃಶವಾದ ಶಾಂತಿ ಮತ್ತು ತೃಪ್ತಿಯನ್ನು ನೀಡುವುದಾಗಿ ಕೂಡ ಹೇಳಿಕೊಳ್ಳುತ್ತದೆ.

ಧರ್ಮಗಳ ಅನೇಕತೆ ಎಂಬ ಪ್ರಕ್ರಿಯೆ ಅನೇಕ ತಾತ್ತ್ವಿಕ ಪ್ರಶ್ನೆಗಳನ್ನು ಎತ್ತುತ್ತದೆ; ಈ ಪ್ರಶ್ನೆಗಳು "ಧರ್ಮಗಳ ತೌಲನಿಕ ಅಧ್ಯಯನ" ಎಂಬ ಮತ್ತೊಂದು ಕ್ಷೇತ್ರಕ್ಕೆ ನಮ್ಮನ್ನು ಕೊಂಡೊಯ್ಯುತ್ತವೆ. ಆದ್ದರಿಂದ ಆ ಪ್ರಶ್ನೆಗಳ ಬಗ್ಗೆ ಇಲ್ಲಿ ಚರ್ಚಿಸಿಲ್ಲ.

ಏನೇ ಆಗಲಿ, ಧರ್ಮಗಳ ವೈವಿಧ್ಯತೆಯೆಂಬುದು ಬರೀ ಒಂದು ತಾತ್ತ್ವಿಕ ಸಮಸ್ಯೆಯಷ್ಟೇ ಅಲ್ಲ, ಅದು ವಿಪುಲ ಸಾಮಾಜಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಪರಿಣಾಮಗಳನ್ನು ಹೊಂದಿದೆ. ಧರ್ಮಗಳಲ್ಲಿನ ಭೇದವು, ಮಾನವ ಚರಿತ್ರೆಯ ಉದ್ದಕ್ಕೂ ಯುದ್ಧಗಳು ಮತ್ತು ಕೋಮುಗಲಭೆಗಳು ಉಂಟಾಗುವಲ್ಲಿ ಒಂದು ಮುಖ್ಯ ಕಾರಣವಾಗಿದೆ. ಯಥಾಸ್ಥಿತಿಯ ಶಾಂತಿಯುತ ಸಮಾಜದಲ್ಲಿಯೇ, ಇತರ ಧರ್ಮಗಳ ಅನುಯಾಯಿಗಳನ್ನು ಕುರಿತು ಬಹಳಷ್ಟು ಜನರು ದುರಭಿಪ್ರಾಯ ಮತ್ತು ದ್ವೇಷವನ್ನು ಹೊಂದಿರುತ್ತಾರೆ. ಒಂದು ನೂರು ವರ್ಷಗಳಿಗೂ ಹಿಂದೆಯೇ ಸ್ವಾಮಿ ವಿವೇಕಾನಂದರು ಹೀಗೆ ಹೇಳಿದ್ದರು: "ಆದಕಾರಣವೆ, ಧರ್ಮದಷ್ಟು ಒಳಿತನ್ನು ಮತ್ತಾವುದೂ ನೀಡಿಲ್ಲ; ಹಾಗೆಯೇ ಧರ್ಮದಷ್ಟು ಭಯಾನಕವಾದುದೂ ಮತ್ತೊಂದಿಲ್ಲ. ಅದರಂತೆಯೆ ಪ್ರೇಮ ಮತ್ತು ಶಾಂತಿಗಾಗಿ ಧರ್ಮ ದುಡಿದಿರುವಷ್ಟು ಮತ್ತಾವುದೂ ದುಡಿದಿಲ್ಲ. ಹಾಗೆಯೇ ಧರ್ಮದ ಹೆಸರಿನಲ್ಲಿ ಬಿತ್ತಿದ ಘೋರ ವೈಮನಸ್ಯವನ್ನು ಮೀರಿದುದೂ ಯಾವುದೂ ಇಲ್ಲ. ಮಾನವ–ಸಹೋದರತ್ವದ ಭಾವನೆ ನೆಲೆಸುವುದಕ್ಕೆ ಧರ್ಮ ಮಾಡಿದಷ್ಟು ಸಹಾಯವನ್ನು ಮತ್ತಾವುದೂ ಮಾಡಿಲ್ಲ; ಧರ್ಮ ಬಿತ್ತಿದಷ್ಟು ಅಸಹನೀಯ ದ್ವೇಷವನ್ನೂ ಮತ್ತಾವುದೂ ಬಿತ್ತಿಲ್ಲ. ಧರ್ಮಾರ್ಥದ ಸಂಸ್ಥೆಗಳು, ಔಷಧಾಲಯಗಳು, ಪ್ರಾಣಿಗಳಿಗೂ ಕೂಡ ಚಿಕಿತ್ಸಾಲಯಗಳು ಇವನ್ನು ಧರ್ಮ ಮಾಡಿದಷ್ಟು ಮತ್ತೊಂದು ಮಾಡಿಲ್ಲ; ಧರ್ಮದಷ್ಟು ಮತ್ತಾವುದೂ ಪ್ರಪಂಚವನ್ನು ರಕ್ತದಲ್ಲಿ ತೋಯಿಸಿಯೂ ಇಲ್ಲ."(ಕೃತಿಶ್ರೇಣಿ, ೨: ೨೦೩)

ಏನೇ ಇರಲಿ, ವೈವಿಧ್ಯತೆಯೊಂದೇ ಧಾರ್ಮಿಕ ಸಂಘರ್ಷಣೆಗಳಿಗೆ ಸಾಕಷ್ಟು ಕಾರಣವಾಗಲಾರದೆಂಬುದು ಸುಸ್ಪಷ್ಟ. ಏಕೆಂದರೆ ಬಹುತೇಕ ಎಲ್ಲ ಸಮಾಜಗಳಲ್ಲಿಯೂ ವಿವಿಧ ಸ್ವಭಾವಗಳ ಜನರು ಇತರರೊಂದಿಗೆ ಶಾಂತಿಯುತ ಸಹಬಾಳ್ವೆಯನ್ನು ನಡೆಸುತ್ತಿರುವುದನ್ನು ಕಾಣಬಹುದು. ಈ ಸಂದರ್ಭದಲ್ಲಿ ಎರಡು ಅಂಶಗಳನ್ನು ಗಮನಿಸಬೇಕು. ಮೊದಲನೆಯದಾಗಿ ಧಾರ್ಮಿಕ ಸಂಘರ್ಷಣೆಗಳು ಆಂತರಿಕ ಹಾಗೂ ಬಾಹ್ಯ ಕಾರಣಗಳನ್ನು ಹೊಂದಿವೆ. ಮತ್ತೊಂದು ಧರ್ಮಕ್ಕೆ ವಿರುದ್ಧವಾಗಿರುವ, ಒಂದು ಧರ್ಮದ ಗೊತ್ತಾದ ಸಿದ್ಧಾಂತಗಳು ಅಥವಾ ಪದ್ಧತಿಗಳ ಆಚರಣೆಯೇ ಆಂತರಿಕ ಕಾರಣ. ಪಟ್ಟಭದ್ರ ಹಿತಾಸಕ್ತಿಗಳು, ಸಂಸ್ಥೆಗಳು, ರಾಜಕೀಯ ಪಕ್ಷಗಳು ಮುಂತಾದವು ಧರ್ಮವನ್ನು ಬಳಸುವುದು ಬಾಹ್ಯಕಾರಣ. ರಾಜ್ಯದ ಪೋಷಣೆಯಲ್ಲಿರುವ ಸಂಸ್ಥೆಗಳು ಧರ್ಮವನ್ನು ಬಳಸುವುದರಿಂದ ಉಂಟಾಗುವ ಅಪಾಯದ ಬಗ್ಗೆ ಸ್ವಾಮಿ ವಿವೇಕಾನಂದರು ಹೀಗೆ ಹೇಳಿದ್ದಾರೆ: " ನನ್ನ ಸೀಮಿತ ಅನುಭವದಲ್ಲಿ ನಾನು ಈ ಜ್ಞಾನವನ್ನು ಶೇಖರಿಸಿರುವೆನು. ಯಾವ ಭೀಕರ ಕೃತ್ಯಕ್ಕೆ ನಾವು ಧರ್ಮವನ್ನು ದೂರುತ್ತೇವೆಯೋ ಅದಕ್ಕೆ ಧರ್ಮ ಕಾರಣವೇ ಅಲ್ಲ. ಯಾವ ಧರ್ಮವೂ ಜನರನ್ನು ಹಿಂಸಿಸಲಿಲ್ಲ, ಯಾವ ಧರ್ಮವೂ ಮಂತ್ರವಾದಿಗಳನ್ನು ಸುಡಲಿಲ್ಲ. ಇಂತಹ ಭೀಕರ ಕೃತ್ಯಗಳನ್ನು ಮಾಡುವಂತೆ ಜನರನ್ನು ಯಾರು ಉದ್ರೇಕಿಸಿದ್ದು? ರಾಜಕೀಯ, ಎಂದೂ ಧರ್ಮವಲ್ಲ. ಇಂತಹ ರಾಜಕೀಯವನ್ನು ಧರ್ಮವೆಂದು ಕರೆದರೆ ಇದಕ್ಕೆ ಯಾರು ಹೊಣೆ?" (ಕೃತಿಶ್ರೇಣಿ. ೭.೨೮)

ಎರಡನೆಯದಾಗಿ, ಧಾರ್ಮಿಕ ಸಂಘರ್ಷಗಳ ಚರಿತ್ರೆಯನ್ನು ನಾವು ಅಧ್ಯಯನ ಮಾಡಿದಾಗ, ಕಳೆದ ಕೆಲವು ಶತಮಾನಗಳಲ್ಲಿ ಈ ಸಂಘರ್ಷಗಳು ತಮ್ಮ ಸ್ವರೂಪದಲ್ಲಿ ಬಹಳಷ್ಟು ಬದಲಾವಣೆ ಹೊಂದಿರುವುದನ್ನು ನಾವು ಕಾಣಬಹುದು. ಮಾನವ ಜೀವನದಲ್ಲಿ ಧರ್ಮಗಳು ವಹಿಸಿರುವ ಪಾತ್ರಗಳಲ್ಲಿನ ವ್ಯತ್ಯಾಸದಿಂದ ಈ ಪರಿವರ್ತನೆಗಳು ಉಂಟಾಗಿವೆ. ಹದಿನೆಂಟನೆಯ ಶತಮಾನಕ್ಕೆ

> ಮಹಾನ್ ವಿಶ್ವರಹಸ್ಯಗಳ ಪರಿಹಾರಗಳ ವಿಷಯದಲ್ಲಿ ಜನರು ವೈವಿಧ್ಯತೆಯನ್ನು ತಳೆಯಲು ಯಾಕೆ ತಾನೇ ಅವಕಾಶವೀಯಬಾರದು? ಪ್ರತಿಯೊಬ್ಬನೂ ಪರಮಾರ್ಥದ ಬಗೆಗಿನ ತನ್ನ ಮಾರ್ಗವನ್ನು ತಾನೇ ಹುಡುಕಿಕೊಳ್ಳಲಿ. ಜೀವನದಲ್ಲಿ ಸರ್ವೋಚ್ಚ ವಿಧೇಯತೆಯನ್ನು ಯಾವುದರಲ್ಲಿ ಇರಿಸಬೇಕೆಂಬ ಬಗ್ಗೆ ಪರಿಕಲ್ಪನೆಯನ್ನು ಸ್ವತಃ ಹೊಂದಲಿ. ಜೀವನಾದರ್ಶವನ್ನು ಸ್ವಂತವಾಗಿ ಇಟ್ಟುಕೊಳ್ಳಲಿ. ಈ ಬಗೆಯ ಪ್ರತಿ ವ್ಯಷ್ಟಿ ವಿಶ್ವದೃಷ್ಟಿಯೂ ವಿಶಾಲ ಸಮಷ್ಟಿ ದೃಷ್ಟಿಕೋನಕ್ಕೆ ಸತ್ಯವನ್ನು ಮತ್ತು ಸೌಂದರ್ಯವನ್ನು ತಂದುಕೊಡುವುದು. ಇದರಿಂದ ಜನರು ತಮ್ಮ ದರ್ಶನ, ಅಂತಸ್ತು ಮತ್ತು ಸಮರ್ಪಣಾಭಾವ– ಇವುಗಳ ಮೂಲಕ ಅಭಿವೃದ್ಧಿಯನ್ನು ಹೊಂದುವರು. – *ಅಲ್ಗೆರ್‌ನನ್ ಬ್ಲ್ಯಾಕ್* (Algernon Black)

ಮೊದಲು, ಧರ್ಮಗಳು ಬಹುತೇಕ ಮೋಕ್ಷದ ಕಡೆಗೇ ಸಂಪೂರ್ಣ ಕಾಳಜಿ ಹೊಂದಿದ್ದವು. ಮಧ್ಯಕಾಲೀನ ಯುಗದಲ್ಲಿ ಉಂಟಾದ ಬಹಳಷ್ಟು ಧಾರ್ಮಿಕ ಯುದ್ಧಗಳು ಹಾಗೂ ಕಿರುಕುಳಗಳು, ಯಾರು ಸ್ವರ್ಗಕ್ಕೆ ಹೋಗುತ್ತಾರೆ, ಯಾರು ನರಕಕ್ಕೆ ಹೋಗುತ್ತಾರೆ ಎಂಬುದನ್ನು ಕುರಿತದ್ದಾಗಿತ್ತು. ಫ್ರೆಂಚ್ ಕ್ರಾಂತಿ, ಕೈಗಾರಿಕಾ ಕ್ರಾಂತಿ ಮುಂತಾದ ಐತಿಹಾಸಿಕ ಘಟನೆಗಳಿಂದ, ಧರ್ಮಕ್ಕೆ ಲೌಕಿಕ ಧೋರಣೆಗಳ ಸಂಪರ್ಕವುಂಟಾಯಿತು. ಇದರಿಂದ ಅದಕ್ಕೆ ಮಾನವೀಯ ವಿಷಯಗಳ ಜೊತೆಗೆ ಸಮೀಕರಣವುಂಟಾಯಿತು. ತತ್ಪರಿಣಾಮವಾಗಿ ಆಧುನಿಕ ಕಾಲದಲ್ಲಿ, ಧಾರ್ಮಿಕ ಸಂಘರ್ಷಗಳು ಸೈದ್ಧಾಂತಿಕ ಭೇದಗಳನ್ನು ಕುರಿತವುಗಳಾಗಿಲ್ಲ; ಆದರೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವಿಷಯಗಳಿಗೆ ಸಂಬಂಧಿಸಿದವುಗಳಾಗಿವೆ ಎನ್ನುವುದನ್ನು ಗಮನಿಸಬೇಕು.

ಬಹಳ ಪ್ರಾಚೀನ ಕಾಲದಿಂದಲೂ ನಮಗೆ ಸ್ವಾತಂತ್ರ್ಯ ದೊರೆಯುವವರೆಗೂ, ಭಾರತವು ಧಾರ್ಮಿಕ ಸಮನ್ವಯದ ಭೂಮಿಯಾಗಿತ್ತು. ಧಾರ್ಮಿಕ ಸ್ವಾತಂತ್ರ್ಯ, ಸಹನೆ ಮತ್ತು ಸಮನ್ವಯಗಳು ಭಾರತೀಯ ಗುಣವೈಶಿಷ್ಟ್ಯದ (ethos) ಲಕ್ಷಣಗಳಾಗಿದ್ದವು. ಆದರೆ ಸ್ವಾತಂತ್ರ್ಯ ಬಂದ ಮೇಲೆ, ವಿಶೇಷತಃ ಇತ್ತೀಚಿನ ದಿನಗಳಲ್ಲಿ, ಕೋಮು ಗಲಭೆ, ಪೂಜಾಸ್ಥಳಗಳನ್ನು ಅಪವಿತ್ರಗೊಳಿಸುವುದು, ಧಾರ್ಮಿಕ ಮುಂದಾಳುಗಳ ಕೊಲೆ ಮುಂತಾದವು ಬಹಳ ಸಾಮಾನ್ಯವಾಗಿವೆ. ಮತ್ತೊಂದು ವಿವಾದಾಸ್ಪದ ಬದಲಾವಣೆ ಎಂದರೆ, ಮೂಲಭೂತ ವಾದ (fundamentalism) ತಲೆ ಎತ್ತಿರುವುದು. ಏನೇ ಆದರೂ, ಈ ಘಟನೆಗಳು ಭಾರತೀಯ ಗುಣವೈಶಿಷ್ಟ್ಯದ ಮಾರ್ಗವನ್ನು ಬಿಟ್ಟು ನಡೆದಿರುವಂತಹವು ಎಂದೇ ನಾವು ತಿಳಿಯಬೇಕು. ಈ ಮಾರ್ಗಚ್ಯುತಿಯ ಘಟನೆಗಳು, ವಸ್ತುತಃ, ಭಾರತೀಯ ಗುಣವೈಶಿಷ್ಟ್ಯದ ವಿರುದ್ಧ ಕೆಲಸ ಮಾಡುತ್ತಿರುವ ಶಕ್ತಿಗಳ ವಿರುದ್ಧ, ಭಾರತೀಯ ಮನಸ್ಸು ತೋರ್ಪಡಿಸಿದ ಪ್ರತಿಕ್ರಿಯೆಗಳಾಗಿವೆ.

ಧಾರ್ಮಿಕ ಸಂಘರ್ಷಗಳು ಹಾಗೂ ಕೋಮು ಸಂಘರ್ಷಗಳು ಇಂದು ಭಾರತದಲ್ಲಿ ಗಂಭೀರ ಪ್ರಮಾಣಗಳನ್ನು ತಳೆದಿವೆ. ಹೀಗಾಗಿ ಧಾರ್ಮಿಕ ಸಮನ್ವಯ ಎನ್ನುವುದು ಎಲ್ಲ ಜನರ ಬಹುಮುಖ್ಯ ಮತ್ತು ಆದ್ಯತೆಯ ಕಾಳಜಿಯಾಗಿದೆ.

## ವಿವಿಧ ಧರ್ಮಗಳ ವೈವಿಧ್ಯಗಳ ಮಾನ್ಯತೆ

ಮೊಟ್ಟಮೊದಲು, ಧಾರ್ಮಿಕ ಸಮನ್ವಯವನ್ನು 'ಉದಾಸೀನತಾ ವಾದ' (Indifferentism) ದಿಂದ ಬೇರ್ಪಡಿಸಿ ನೋಡಬೇಕು. 'ಉದಾಸೀನತಾ ವಾದ' ವೆಂದರೆ, ವಿವಿಧ ಧರ್ಮಗಳ ನಡುವೆ ಯಾವುದೇ ಭೇದಗಳಿಲ್ಲ ಮತ್ತು ಬಹುತೇಕ ಅವೆಲ್ಲವೂ ಸಮಾನವಾದವು ಎಂದು ತಿಳಿಯುವುದು. ಇದೊಂದು ತಾತ್ತ್ವಿಕ ಕಲ್ಪನೆ. ಅದೇ ರೀತಿ, ಜನಸಾಮಾನ್ಯರಲ್ಲಿ, ಅದರಲ್ಲೂ ಭಾರತದ ಗ್ರಾಮೀಣ ಪ್ರದೇಶಗಳಲ್ಲಿ 'ಎಲ್ಲ ಧರ್ಮಗಳೂ ಒಂದೇ' ಎಂಬ ಜನಪ್ರಿಯ ನಂಬಿಕೆ ಪ್ರಚಲಿತವಾಗಿದೆ. ಇತರ ಧರ್ಮಗಳ ಬಗೆಗಿನ ಅಜ್ಞಾನವೇ ಈ ಸರಳ ಭಾವನೆಗೆ ಆಧಾರ. ಈ ಬಗೆಯ ಅಜ್ಞಾನವನ್ನು ಧರ್ಮಸಾಮರಸ್ಯದ ಭದ್ರ ಬುನಾದಿಯನ್ನಾಗಿ ಪರಿಗಣಿಸಲಾಗದು.

ಧರ್ಮಗಳ ನಡುವಣ ವ್ಯತ್ಯಾಸಗಳನ್ನು ಮಾನ್ಯಮಾಡುವುದು (recognition) ಧರ್ಮಸಾಮರಸ್ಯದ ಸರಿಯಾದ ಪರಿಜ್ಞಾನಕ್ಕೆ ಮೊದಲನೆಯ ಹೆಜ್ಜೆ. ಪ್ರತಿಯೊಂದು ಧರ್ಮವೂ, ಶತಶತಮಾನಗಳ ಬೆಳವಣಿಗೆಯ ಫಲವಾಗಿ, ತನ್ನದೇ ಒಂದು ನಿರ್ದಿಷ್ಟ ಸ್ವಂತಿಕೆಯನ್ನು ಪಡೆದುಕೊಂಡಿದೆ. ಅದರಲ್ಲಿ ಅದಕ್ಕೇ ಮೀಸಲಾದ ಅನೇಕ ವಿಶಿಷ್ಟ ಅಂಶಗಳಿವೆ. ಅವೆಂದರೆ, ಒಂದು ಸಂಕೀರ್ಣ ತಾತ್ತ್ವಿಕ ಚೌಕಟ್ಟು, ವಿಪುಲ ಸಾಹಿತ್ಯ ರಾಶಿ, ಹಲವಾರು ಸಾಮಾಜಿಕ ಕಟ್ಟು ಪಾಡುಗಳು ಮತ್ತು ಸಮೃದ್ಧ ಅನುಭಾವಿಕ(mystical) ಪರಂಪರೆಗಳು. ಇದೇ ಸಮಯದಲ್ಲಿ, ಇಂಥ ವ್ಯತ್ಯಾಸಗಳು ಧರ್ಮಗಳ ನಡುವೆ ಮೀರಲಾಗದ ಪ್ರತಿಬಂಧಗಳನ್ನು ನಿರ್ಮಿಸಿವೆ; ಮತ್ತು, ಧರ್ಮ ಸಾಮರಸ್ಯದ ಬಗೆಗಿನ ಯಾವುದೇ ಚರ್ಚೆಯಲ್ಲಿ ಈ ಪ್ರತಿಬಂಧಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ.

## ಸಮನ್ವಯ ಎಂಬುದು ಸಹಿಷ್ಣುತೆಗಿಂತ ಭಿನ್ನ

ಧರ್ಮಸಮನ್ವಯವನ್ನು ಧಾರ್ಮಿಕ ಸಹಿಷ್ಣುತೆಯಿಂದ ಬೇರ್ಪಡಿಸಿ ನೋಡಬೇಕು. ಸಹಿಷ್ಣುತೆ ಎಂದರೆ 'ಒಂದು ಮಟ್ಟದ ತಾಳಿಕೊಳ್ಳುವಿಕೆ' ಮತ್ತು 'ಕೆಡುಕಾದುದನ್ನು ಮಾಡುವುದರಿಂದ ಹಿಂಜರಿಕೆ' ಎಂದು ಅರ್ಥವಾಗುತ್ತದೆ. ಈ ವಿಷಯದಲ್ಲಿ ಸ್ವಾಮಿ ವಿವೇಕಾನಂದರ ಮಾತನ್ನು ಉದ್ಧರಿಸುವುದು ಯುಕ್ತವಾಗಿದೆ: " ಕೇವಲ ಸಹಿಷ್ಣುತೆ ಮಾತ್ರವಲ್ಲ, ಅನೇಕ ವೇಳೆ ಸಹಿಷ್ಣುತೆ ಎಂಬುದು ಈಶ್ವರನಿಂದೆ. ನಾನು ಅದನ್ನು ನಂಬುವುದಿಲ್ಲ. ನಾನು ಸ್ವೀಕಾರವನ್ನು ನಂಬುವೆನು. ನಾನೇಕೆ ಸಹಿಸಬೇಕು? ಸಹಿಸುವುದು ಎಂದರೆ, ನೀವು ತಪ್ಪು ಎಂಬುದು ನನಗೆ ಗೊತ್ತು; ಆದರೆ ಬದುಕುವುದಕ್ಕೆ ನಿಮಗೆ ಅವಕಾಶ ಕೊಡುತ್ತಿರುವೆನು ಎಂದು. ನಾನು ಮತ್ತು ನೀವು, ಇತರರು ಜೀವಿಸಲು ಅವಕಾಶ ಕೊಡುವುದು ಈಶ್ವರ ನಿಂದೆಯಲ್ಲವೇ?" (ಕೃತಿಶ್ರೇಣಿ ೨: ೨೧೬)

**ಧರ್ಮಗಳು ಬಹುವಾಗಿವೆ ಮತ್ತು ವಿವಿಧವಾಗಿವೆ, ಆದರೆ ವೈಚಾರಿಕತೆ ಮತ್ತು ಒಳ್ಳೆಯತನ ಒಂದೇ ಆಗಿದೆ.** – *ಎಲ್ಬರ್ಟ್ ಹಬ್ಬರ್ಡ್*

**ಪ್ರತಿಯೊಂದು ಮತೀಯಭಾವನೆ, ಪ್ರತಿಯೊಂದು ತತ್ತ್ವಶಾಸ್ತ್ರೀಯ ಅಥವಾ ದೈವಶಾಸ್ತ್ರೀಯ ಪಂಗಡ ಆರಂಭವಾಗುವುದು ಯಾವುದೋ ಒಂದು ಬಗೆಯ ಅಂತರಂಗ ಅನುಭಾವದ ಬೌದ್ಧಿಕತೆಯಿಂದಲೇ.**
– *ಫೆಲಿಕ್ಸ್ ಅಡ್ಲರ್*

**ಮಾನವನು ಧಾರ್ಮಿಕ ಪ್ರಾಣಿ. ಹಲವಾರು ಬಗೆಗಳಿರುವ ನೈಜಧರ್ಮವನ್ನು ಹೊಂದಿರುವ ಪ್ರಾಣಿವಿಶೇಷವೂ ಅವನೇ. ತನ್ನ ಸಹವರ್ತಿಗಳನ್ನು ತನ್ನಂತೆಯೇ ಪ್ರೀತಿಸುವವನೂ ಅವನೇ ಮತ್ತು ತನ್ನ ಧಾರ್ಮಿಕ ಭಾವನೆಗಳು ಸಾಧುವಾಗಿರದಿದ್ದರೆ, ಮಿಕ್ಕವರ ಕೊರಳುಕೊಯ್ಯುವವನೂ ಅವನೇ. ಸಂತಸ ಮತ್ತು ಸ್ವರ್ಗಗಳಿಗೆ ತನ್ನ ಸಹೋದರನ ಮಾರ್ಗವನ್ನು ಸುಲಭಗೊಳಿಸಲು, ಪ್ರಾಮಾಣಿಕವಾಗಿ ಯತ್ನಿಸುವ ದಿಶೆಯಲ್ಲಿ, ಈ ಭೂಗೋಳವನ್ನು ಸ್ಮಶಾನವನ್ನಾಗಿಸಿರುವವನೂ ಅವನೇ.** – *ಮಾರ್ಕ್ ಟ್ವೈನ್*

## ಅಂತರಧರ್ಮೀಯ ಸಮನ್ವಯತೆ ಮತ್ತು ಅಂತಃಧರ್ಮೀಯ ಸಮನ್ವಯತೆ

ಧರ್ಮಸಮನ್ವಯದ ಬಗ್ಗೆ ಮಾತನಾಡುವಾಗ, ಒಂದೊಂದು ಧರ್ಮವನ್ನೂ ಅಖಂಡವೆಂಬಂತೆ ನಾವು ಪರಿಗಣಿಸುತ್ತೇವೆ. ಆದರೆ ನಿಜವಾದ ವಿಷಯ ಏನೆಂದರೆ, ಪ್ರತಿಯೊಂದು ಧರ್ಮವೂ ಹಲವು ಪ್ರಮುಖ ಒಳಪಂಗಡಗಳಾಗಿ ಮತ್ತು ಬಹುಸಂಖ್ಯೆಯ ಗೌಣ ಒಳಪಂಗಡಗಳಾಗಿ ಶ್ರೇಣೀಕೃತವಾಗಿ(vertically) ವಿಭಜನೆ ಹೊಂದಿದೆ. ಉದಾಹರಣೆಗೆ, ಹಿಂದೂ ಧರ್ಮದಲ್ಲಿರುವ ವೈಷ್ಣವ ಮತ್ತು ಶೈವ ಪಂಗಡಗಳು; ಕ್ರೈಸ್ತ ಧರ್ಮದಲ್ಲಿರುವ ಕ್ಯಾಥೊಲಿಕ್, ಪ್ರೊಟೆಸ್ಟಾಂಟ್ ಮತ್ತು ಈಸ್ಟರ್ನ್ ಚರ್ಚ್‌ಗಳು; ಇಸ್ಲಾಂ ಧರ್ಮದಲ್ಲಿರುವ ಶಿಯಾ, ಸುನ್ನಿ, ಇಸ್ಮೈಲಿ ಪಂಗಡಗಳು; ಬೌದ್ಧ ಧರ್ಮದ ಮಹಾಯಾನ, ವಜ್ರಯಾನ ಮತ್ತು ಥೇರಾವಾದ ಪಂಗಡಗಳು. ಅನೇಕ ಸಮಯಗಳಲ್ಲಿ, ಬೇರೆ ಧರ್ಮಗಳ ಬಗೆಗೆ ತೋರುವುದಕ್ಕಿಂತ ಹೆಚ್ಚಿನ ದ್ವೇಷಭಾವನೆಯನ್ನು ತಮ್ಮತಮ್ಮಲ್ಲೇ ಈ ಒಳಪಂಗಡಗಳು ತೋರುತ್ತವೆ. ಧರ್ಮಸಾಮರಸ್ಯದ ಬಗ್ಗೆ ಮಾತನಾಡುವಾಗ, ಪ್ರತಿಯೊಂದು ಧರ್ಮದ ಆಂತರಂಗಿಕ ಸಾಮರಸ್ಯ ಅಂದರೆ, **ಅಂತಃಧರ್ಮೀಯ ಸಾಮರಸ್ಯ** ಮತ್ತು ಧರ್ಮಗಳ ನಡುವಿನ ಸಾಮರಸ್ಯ ಅಂದರೆ **ಅಂತರಧರ್ಮೀಯ ಸಾಮರಸ್ಯ** – ಇವೆರಡನ್ನೂ ಒಟ್ಟಿಗೆ ಪರಿಗಣನೆಗೆ ತೆಗೆದುಕೊಳ್ಳ ಬೇಕಾಗುತ್ತದೆ.

## ಧರ್ಮಸಮನ್ವಯತೆಯ ಸಮಸ್ಯೆಗಳ ಕುರಿತು ದೃಷ್ಟಿಕೋನಗಳು

ಧರ್ಮಸಮನ್ವಯದ ಸಮಸ್ಯೆಯನ್ನು ಕುರಿತು ನಾಲ್ಕು ಪ್ರಮುಖ ದೃಷ್ಟಿಕೋನಗಳಿವೆ: ರಾಜಕೀಯ, ಸಾಮಾಜಿಕ, ದೈವ ಶಾಸ್ತ್ರೀಯ(theological) ಮತ್ತು ಅನುಭಾವಿಕ(mystical). **ರಾಜಕೀಯ ದೃಷ್ಟಿಕೋನವೆಂದರೆ**, ಸರ್ಕಾರವು ಧರ್ಮದ ಬಗ್ಗೆ ತಳೆದಿರುವ ನೀತಿ. ಆಧುನಿಕ ಕಾಲದಲ್ಲಿ ಇದು ಅತ್ಯಂತ ಮಹತ್ವದ ದೃಷ್ಟಿಕೋನವಾಗಿದೆ, ಏಕೆಂದರೆ, ಅದನ್ನು ಹೊರತುಪಡಿಸಿದರೆ, ಮಿಕ್ಕ ದೃಷ್ಟಿಕೋನಗಳು ಪ್ರಭಾವಶಾಲಿಗಳಾಗಿ ಉಳಿಯುವುದಿಲ್ಲ. ಪುರೋಹಿತಶಾಹಿ ಪ್ರಬಲವಾಗಿರುವ ದೇಶಗಳಲ್ಲಿಯೂ ಸರ್ಕಾರಗಳು ಧಾರ್ಮಿಕ ಸಹಿಷ್ಣುತೆಯ ನೀತಿಯನ್ನು ಅನುಸರಿಸು ತ್ತವೆ; ಕೋಮುಗಲಭೆಗಳನ್ನು ತಡೆಯಲು ತಕ್ಕ ಕ್ರಮ ಕೈಗೊಳ್ಳುತ್ತವೆ. ಪ್ರಜಾಪ್ರಭುತ್ವ ರಾಷ್ಟ್ರಗಳಾದ ಅಮೆರಿಕ ಮತ್ತು ಭಾರತಗಳಲ್ಲಿ ಗಣರಾಜ್ಯವನ್ನು 'ಧರ್ಮನಿರಪೇಕ್ಷ' (secular) ಎಂದು ಘೋಷಿ ಸುವ ಮೂಲಕ ರಾಜಕೀಯ ದೃಷ್ಟಿಕೋನದ ಪಾಲನೆಯಾಗುತ್ತಿದೆ. ಈ ಬಗೆಯ ಧರ್ಮನಿರಪೇಕ್ಷ ನೀತಿ ಬಹಳಷ್ಟು ಟೀಕೆಯನ್ನು ಎದುರಿಸುತ್ತಿದೆ. ಆದರೂ ಇದು ಧರ್ಮದ ಹೆಸರಿನಲ್ಲಿ ತಲೆಯೆತ್ತುವ ಮೂಲಭೂತ ವಾದ ಮತ್ತು ಸಾಮಾಜಿಕ ಅನ್ಯಾಯಗಳಿಗೆ ಮಾನ್ಯತೆಯನ್ನು ನಿರಾಕರಿಸುವ ಒಂದು ಸಾಧನವಾಗಿದೆ ಎನ್ನು ವುದು ಒಪ್ಪತಕ್ಕ ವಿಷಯ.

ಸಾಮಾನ್ಯ ಜನ ಅನುಕರಿಸುವುದು **ಸಾಮಾಜಿಕ ದೃಷ್ಟಿಕೋನ**. ಅವರ ಪಾಡಿಗೆ ಅವರನ್ನು ಬಿಟ್ಟರೆ ಅವರು ಯಾವ ಧಾರ್ಮಿಕ

> ನಾನೆಂದೂ ನನ್ನ ಧರ್ಮದ ಕುರಿತು ಮಾತನಾಡಿಲ್ಲ; ಇತರರ ಧರ್ಮವನ್ನು ಪರೀಕ್ಷೆಗೆ ಒಳಪಡಿಸಿಲ್ಲ. ನಾನೆಂದೂ ಮತಾಂತರಕ್ಕೆ ಯತ್ನಿಸಿಲ್ಲ, ಇನ್ನೊಬ್ಬನ ಮತವನ್ನು ಪರಿವರ್ತಿಸಲು ಇಚ್ಛಿಸಿಯೂ ಇಲ್ಲ. ನಿನ್ನ ಧರ್ಮವು ಉತ್ತಮವಾದ ಧರ್ಮವೆಂಬ ಸಂತೃಪ್ತಿ ನನಗಿದೆ, ಕಾರಣ ನಿನ್ನಂತಹ, ಗುಣ ಮತ್ತು ನಿಖರತೆಗಳಲ್ಲಿ ಆದರ್ಶವ್ಯಕ್ತಿಯನ್ನು ಅದು ಸೃಷ್ಟಿಸಿದೆ. ಏಕೆಂದರೆ, ಒಂದು ಧರ್ಮದ ಮಹತ್ವದ ನ್ಯಾಯನಿರ್ಧಾರವಾಗಬೇಕಾದುದು ನಮ್ಮ ಜೀವನಗಳಲ್ಲಿ, ನಮ್ಮ ಮಾತುಗಳಲ್ಲಲ್ಲ. – ***ಥಾಮಸ್ ಜೆಫರ್‌ಸನ್*** (ಶ್ರೀಮತಿ ಹೆಚ್. ಹ್ಯಾರಿಸನ್ ಸ್ಮಿತ್ ಎಂಬ ಮಹಿಳೆಗೆ ೧೮೧೬ರಲ್ಲಿ ಬರೆದ ಪತ್ರದಲ್ಲಿ)

ಪಂಗಡ ಅಥವಾ ಶ್ರದ್ಧೆಗೆ ಸೇರಿದವರಾದರೂ, ತಮ್ಮ ನೆರೆಹೊರೆ ಯವರೊಂದಿಗೆ ಶಾಂತಿಯಿಂದ ಬಾಳುತ್ತಾರೆ. ಪಟ್ಟಭದ್ರ ಹಿತಾಸಕ್ತಿ ಗಳು ಪ್ರಚೋದಿಸಿದಾಗ ಮಾತ್ರ ಕೋಮು ಘರ್ಷಣೆಗಳು ಆರಂಭ ವಾಗುತ್ತವೆ. ಧಾರ್ಮಿಕ ಮುಖಂಡರು ಮತ್ತು ಸ್ವಯಂಸೇವಾ ಸಂಸ್ಥೆಗಳು ಬಹು ಮಹತ್ವದ ಪಾತ್ರವನ್ನು ವಹಿಸಬೇಕಾದ ಕ್ಷೇತ್ರವಿದು.

ದೈವಶಾಸ್ತ್ರೀಯ ದೃಷ್ಟಿಕೋನವೆಂದರೆ ಧಾರ್ಮಿಕ ಸಿದ್ಧಾಂತ ಗಳನ್ನು ಧರ್ಮಸಮನ್ವಯತೆಗೆ ಹೊಂದುವಂತೆ ಅವುಗಳನ್ನು ಹೊಸದಾಗಿ ವಿವರಿಸುವುದು. ಎಲ್ಲ ವಿಶ್ವಧರ್ಮಗಳಲ್ಲಿನ ಸಿದ್ಧಾಂತ ಗಳು ಹಲವು ಶತಮಾನಗಳ ಹಿಂದೆ ರೂಪುಗೊಂಡಂಥವು ಗಳಾಗಿವೆ. ಅವುಗಳಲ್ಲಿ ಕೆಲವು ಧರ್ಮಸಮನ್ವಯತೆಗೆ ವಿರುದ್ಧವಾಗು ವಂತಿವೆ. ಅವುಗಳನ್ನು ಬದಲಿಸಲಾಗದಿದ್ದರೆ, ಇಂದಿನ ಜಗತ್ತಿನ ಆವಶ್ಯಕತೆಗಳಿಗೆ ಹೊಂದುವಂತೆ, ಅವುಗಳಿಗೆ ನೂತನ ವ್ಯಾಖ್ಯಾನ ಮಾಡಬಹುದು. ಹಿಂದೂ ಧರ್ಮದ ಧಾರ್ಮಿಕ ಗ್ರಂಥಗಳಲ್ಲಿ ಎರಡು ಬಗೆ: 'ಶ್ರುತಿ' ಮತ್ತು 'ಸ್ಮೃತಿ'. ಪ್ರಾಚೀನ ಋಷಿಮುನಿಗಳಿಗೆ ಅನಾವರಣಗೊಂಡ ಆಧ್ಯಾತ್ಮಿಕ ಪ್ರಪಂಚದ ಚಿರಂತನ ಸತ್ಯಗಳು ಮತ್ತು ನಿಯಮಗಳು 'ಶ್ರುತಿ' ಎನ್ನಿಸಿಕೊಳ್ಳುತ್ತವೆ. ಅವುಗಳನ್ನು ಮಾರ್ಪಡಿಸಲಾಗದು. ಆದರೆ, ಆಚಾರ್ಯರು ಅವುಗಳನ್ನು ವಿವಿಧ ರೀತಿಯಲ್ಲಿ ಅರ್ಥೈಸಿದ್ದಾರೆ. ಧರ್ಮದ ಇತರ ವಿಷಯ ಗಳು, ಅದರಲ್ಲೂ ವ್ಯಕ್ತಿಯೊಬ್ಬನ ಕರ್ತವ್ಯಗಳು ಮತ್ತು ಜೀವನ ಮಾರ್ಗಗಳನ್ನು 'ಸ್ಮೃತಿ' ಎಂದು ಕರೆಯಲಾಗಿದೆ. ಸ್ಮೃತಿಯನ್ನು ಮಾರ್ಪಡಿಸಬಹುದಷ್ಟೆ ಅಲ್ಲ, ಅದಕ್ಕೆ ಹೊಸ ಅರ್ಥವಿವರಣೆ ಗಳನ್ನೂ ಕೊಡಬಹುದು. ಆಧುನಿಕ ಕಾಲದಲ್ಲಿ ಸ್ವಾಮಿ ವಿವೇಕಾನಂದರು ಶ್ರೀರಾಮಕೃಷ್ಣರ ದಿವ್ಯ ಅನುಭಗಳ ಬೆಳಕಿನಲ್ಲಿ ಪ್ರಾಚೀನ ಶಾಸ್ತ್ರಗಳನ್ನು ಹೊಸತಾಗಿ ವಿವರಿಸಿದರು. ಅವರ ಭಾವನೆಗಳು ಹಿಂದೂಧರ್ಮದ ಒಳಗೆ ಆಂತರಿಕಸಾಮರಸ್ಯವು ನೆಲೆಗೊಳ್ಳಲು ಸಹಾಯ ಮಾಡಿದವು ಮತ್ತು ಆಧುನಿಕ ಹಿಂದೂಧರ್ಮಕ್ಕೆ ಒಂದು ಸರ್ವಾಂಗೀಣ ರೂಪವನ್ನು ಕೊಟ್ಟವು. ಇದರ ಮೂಲ ತತ್ತ್ವವೆಂದರೆ ಅಂತರಧಾರ್ಮಿಕ ಸಾಮರಸ್ಯಕ್ಕೆ ಒತ್ತು ಕೊಡುವುದು. ಈ ಸಂದರ್ಭದಲ್ಲಿ ಉಲ್ಲೇಖಿಸಬಹುದಾದ ಇನ್ನೊಂದು ವಿಷಯವೇನೆಂದರೆ ಇತ್ತೀಚಿನ ವರ್ಷಗಳಲ್ಲಿ ಕ್ರೈಸ್ತ

ಚರ್ಚುಗಳು ಆರಂಭಿಸಿರುವ 'ಸಂವಾದ' (dialogue) ಕಾರ್ಯಕ್ರಮದ ಅಡಿಪಾಯವಾಗಿ ಇರುವುದು ದೈವಶಾಸ್ತ್ರೀಯ ದೃಷ್ಟಿಕೋನವೇ ಎಂಬುದು.

ಕಡೆಯದಾಗಿ ನಾವು **ಅನುಭಾವಿಕ ದೃಷ್ಟಿಕೋನಕ್ಕೆ** ಬರೋಣ. ಈ ದೃಷ್ಟಿಕೋನವು ಒಂದು ಸಿದ್ಧಾಂತದ ಆಧಾರದ ಮೇಲೆ ನಿಂತಿದೆ. ಶಾಸ್ತ್ರಗಳಿಂದ ದೊರಕುವ ಜ್ಞಾನವಲ್ಲದೆ, ಪರಮಸತ್ಯದ ನೇರ ಅನುಭವ (ಅಪರೋಕ್ಷಾನುಭೂತಿ) ಕೂಡ ಸಾಧ್ಯ ಎನ್ನುವುದೇ ಆ ಸಿದ್ಧಾಂತ. ಇದನ್ನು ಎಲ್ಲ ವಿಶ್ವಧರ್ಮಗಳು ಒಪ್ಪುತ್ತವೆ ಮಾತ್ರವಲ್ಲ, ಪ್ರತಿಯೊಂದು ಧರ್ಮವೂ ಹಲವು ಶತಮಾನಗಳಿಂದ ಬೆಳೆದು ಬಂದ ಸಮೃದ್ಧ ಅನುಭಾವಿಕ ಪರಂಪರೆಯನ್ನು ಹೊಂದಿದೆ. ಆದರೆ ಈ ದೃಷ್ಟಿಕೋನದಲ್ಲಿ ಒಂದು ಸಮಸ್ಯೆ ಇದೆ. ಅದು ದರ್ಶನಾನುಭವದ ವಾಸ್ತವಾಂಶದ (content) ಕುರಿತಾದದ್ದು. ಪ್ರಮುಖ ಧರ್ಮಗಳಲ್ಲಿ ಅನುಭಾವದ ವಾಸ್ತವಾಂಶದಲ್ಲಿ ಬಹಳಷ್ಟು ವೈವಿಧ್ಯತೆ ಇದೆ. ರಾಬಿಯಾ, ಮೀರಾ ಮತ್ತು ಸ್ಯೆಂಟ್ ತೆರೆಸಾ ಮುಂತಾದ ಸ್ತ್ರೀ ಅನುಭಾವಿಗಳು ಪಡೆದ ದರ್ಶನಾನುಭವಗಳಲ್ಲಿ ಸಮಾನತೆಯಿಲ್ಲ. ಹಾಗೆಯೇ ಅಲ್ ಘಜ್ಜಲಿ, ಸೈಂಟ್ ಜಾನ್ ಆಫ್ ದಿ ಕ್ರಾಸ್ ಮತ್ತು ಜ್ಞಾನೇಶ್ವರರ ದರ್ಶನಾನುಭವಗಳಲ್ಲೂ ಕೂಡ ಭಿನ್ನತೆಗಳಿವೆ. ಆದರೆ ದಿವ್ಯ ದರ್ಶನಗಳ ವಾಸ್ತವಾಂಶಗಳಲ್ಲಿ ವ್ಯತ್ಯಾಸಗಳು ಕಂಡುಬಂದರೂ, ಅನುಭಾವಿಗಳೆಲ್ಲರೂ ಪರಮಸತ್ಯದ ಅನುಭಾವ ಸಾಧ್ಯ ಎನ್ನುವುದನ್ನು ಒಪ್ಪುತ್ತಾರೆ. ಈ ಒಮ್ಮತವು ಧರ್ಮಸಮನ್ವಯದ ನಿರ್ಮಾಣಕ್ಕೆ ಆಧಾರಸ್ತಂಭವಾಗಲು ಸಾಧ್ಯ. ಈ ಬಗೆಯ ಅನುಭಾವಿಕ ದೃಷ್ಟಿಕೋನವನ್ನು ಶ್ರೀರಾಮಕೃಷ್ಣರು ತಮ್ಮ ಜೀವನದಲ್ಲಿ ಅನುಸರಿಸಿದರು ಮತ್ತು ಸ್ವಾಮಿ ವಿವೇಕಾನಂದರು ಇದನ್ನು ಪ್ರತಿಪಾದಿಸಿದರು.

ಈ ಭಾಗದ ಮುಕ್ತಾಯದಲ್ಲಿ ನಾವು ಸಲಹೆ ಮಾಡುವುದೊಂದಿದೆ. ಧರ್ಮಗಳ ನಡುವಣ ಸಮನ್ವಯದ ನಿರ್ಮಾಣಕ್ಕೆ ಮೇಲಿನ ಎಲ್ಲಾ ನಾಲ್ಕು ದೃಷ್ಟಿಕೋನಗಳ ಕ್ರೋಡೀಕರಣವೇ ಆದರ್ಶ ದೃಷ್ಟಿಕೋನ ಎನ್ನುವುದೇ ಅದು.

*(ಮುಂದುವರಿಯುವುದು)*

## ಪ್ರಾರ್ಥನೆ ಮಾಡುವುದು ಹೇಗೆ?



ಸ್ವಾಮಿ ಶಿವಾನಂದರು ಶ್ರೀರಾಮಕೃಷ್ಣರ ಸಂನ್ಯಾಸಿ ಶಿಷ್ಯರುಗಳಲ್ಲಿ ಒಬ್ಬರು ಹಾಗೂ ಶ್ರೀರಾಮಕೃಷ್ಣ ಮಹಾಸಂಸ್ಥೆಯ ಎರಡನೇ ಅಧ್ಯಕ್ಷರು. ಒಮ್ಮೆ ಅವರ ಶಿಷ್ಯರಾದ ಸ್ವಾಮಿ ಅರೂಪಾನಂದರು ಅವರನ್ನು ಒಂದು ಪ್ರಶ್ನೆ ಕೇಳಿದರು, "ಹೇಗೆ ಜಪ ಹಾಗೂ ಧ್ಯಾನ ಮಾಡುವುದು?" ಸ್ವಾಮಿ ಶಿವಾನಂದರು ಸಂತುಷ್ಟರಾಗಿ ಹೇಳಿದರು, "ಭಗವಂತನ ನಾಮವನ್ನು ಭಕ್ತಿಯಿಂದ ಮತ್ತೆ ಮತ್ತೆ ಉಚ್ಚಾರಣೆ ಮಾಡುವುದಕ್ಕೆ *ಜಪ* ಎಂದು ಹೆಸರು. ಅವನ ಹೆಸರನ್ನು ಅತ್ಯಂತ ಪ್ರೀತಿಯಿಂದ ಉಚ್ಚಾರ ಮಾಡುತ್ತಿರು. ಶ್ರೀರಾಮಕೃಷ್ಣರೇ ಜೀವಂತ ಹಾಗೂ ಜಾಗೃತರಾಗಿರುವ ದೇವರು. ಈ ಯುಗದಲ್ಲಿ ಅವರ ಪವಿತ್ರ ನಾಮವೇ ಮಹಾಮಂತ್ರ. ಆದುದರಿಂದ ಸದಾ ಅವರ ಹೆಸರನ್ನು ಮೌನವಾಗಿ ಜಪಿಸುತ್ತಿರು. ಅಲ್ಲದೆ, ಅತ್ಯಂತ ಕಾತರದಿಂದ ಅವರನ್ನು ಪ್ರಾರ್ಥಿಸು. 'ನನ್ನ ಭಗವಂತ! ಈ ಪ್ರಪಂಚದ ಉದ್ಧಾರಕ್ಕಾಗಿ ನೀನು ಈ ಮನುಷ್ಯ ದೇಹವನ್ನು ಧರಿಸಿ ಎಷ್ಟೊಂದು ಯಾತನೆಗಳನ್ನು ಅನುಭವಿಸಿದೆ! ನಾನೊಬ್ಬ ಕೆಲಸಕ್ಕೆ ಬಾರದ ವ್ಯಕ್ತಿ. ನನ್ನಲ್ಲಿ ತಪಸ್ಸಿಲ್ಲ, ಪೂಜೆಯಿಲ್ಲ, ಜ್ಞಾನವಿಲ್ಲ, ಭಕ್ತಿಯಿಲ್ಲ, ಶ್ರದ್ಧೆಯಿಲ್ಲ, ಪ್ರೀತಿಯಿಲ್ಲ, ಪವಿತ್ರತೆ ಇಲ್ಲ. ದಯವಿಟ್ಟು ನನಗೆ ಜ್ಞಾನವನ್ನು ನೀಡು. ಭಕ್ತಿಯನ್ನು ನೀಡು, ಶ್ರದ್ಧೆಯನ್ನು ನೀಡು, ಪ್ರೀತಿಯನ್ನು ನೀಡು, ಪವಿತ್ರತೆಯನ್ನು ನೀಡು. ಕರುಣೆ ತೋರಿಸಿ ನನ್ನ ಹೃದಯದಲ್ಲಿ ಪ್ರತಿಷ್ಠಿತನಾಗು. ನನ್ನ ಮಾನವ ಜೀವನ ಸಫಲವಾಗಲಿ. ನಿನ್ನ ಒಬ್ಬ ಮಗನು ನನಗೆ ಹೀಗೆ ಪ್ರಾರ್ಥಿಸಲು ಕಲಿಸಿದ್ದಾನೆ. ದಯವಿಟ್ಟು ಕರುಣೆ ತೋರಿ ಅನುಗ್ರಹಿಸು.' ಹೀಗೆ ಮತ್ತೆ ಮತ್ತೆ ಪ್ರಾರ್ಥಿಸುವುದರಿಂದ ಶ್ರೀರಾಮಕೃಷ್ಣರ ಆಶೀರ್ವಾದ ನಿನ್ನ ಮೇಲೆ ಹರಿಯುತ್ತದೆ. ಆಗ ನಿಧಾನವಾಗಿ ಮನಸ್ಸು ಶಾಂತಗೊಂಡು ಧ್ಯಾನ ಮತ್ತು ಪ್ರಾರ್ಥನೆಯಲ್ಲಿ ಏಕಾಗ್ರಗೊಳ್ಳುತ್ತದೆ. ನೀನು ಭಕ್ತಿ ಮತ್ತು ಆನಂದವನ್ನು ಅನುಭವಿಸುವೆ. ನಿನ್ನ ಹೃದಯ ಭರವಸೆಯಿಂದ ತುಂಬುತ್ತದೆ. ಹೀಗೆ ಪ್ರಾರ್ಥನೆ ಮಾಡಿದ ನಂತರ, ಶ್ರೀರಾಮಕೃಷ್ಣರ ನಾಮಜಪವನ್ನು ಮಾಡು. ಸ್ವಲ್ಪ ಹೊತ್ತು ಜಪ ಮಾಡುತ್ತಿದ್ದ ಹಾಗೆ, ತಾನಾಗಿಯೇ ಧ್ಯಾನಾವಸ್ಥೆಗೆ ತಲುಪುವೆ. ನೀನು ಜಪ ಮಾಡುತ್ತಿರುವಾಗ ಭಗವಂತನು ನಿನ್ನನ್ನೇ ನೋಡುತ್ತಿದ್ದಾರೆಂದು ತೀವ್ರವಾಗಿ ಯೋಚಿಸು. ಬಹಳ ಸಮಯದವರೆಗೆ ಮಾಡುವ ಇಂತಹ ಆಲೋಚನೆಯೇ ಒಂದು ವಿಧದ ಧ್ಯಾನ. ಹಾಗೂ ಜಪ ಮಾಡುತ್ತಿರುವಾಗ ಮನಃಪೂರ್ವಕವಾಗಿ ಪ್ರಾರ್ಥಿಸು. ಧ್ಯಾನದಲ್ಲಿ ಹಲವಾರು ಹಂತಗಳು. ಹೀಗೆ ನೀನು ಪ್ರಾರಂಭಿಸಿದಲ್ಲಿ, ಕಾಲಕಾಲಕ್ಕೆ ಅವನೇ ಮುಂದೆ ಹೋಗುವ ಮಾರ್ಗಗಳನ್ನು ತೋರಿಸುವನು. ಅವನನ್ನು ಅತ್ಯಂತ ವ್ಯಾಕುಲತೆಯಿಂದ ಬಯಸು. ಅವನಿಗಾಗಿ ಕಣ್ಣೀರು ಸುರಿಸು. ಮತ್ತೆ ಮತ್ತೆ ಅವನಿಗಾಗಿ ಅಳುವುದರಿಂದ ಮನಸ್ಸಿನ ಕಶ್ಮಲಗಳೆಲ್ಲಾ ತೊಳೆಯಲ್ಪಡುವುದು ಮತ್ತು ಅವನು ನಿನ್ನ ಹೃದಯದಲ್ಲಿ ಕಾಣಿಸಿಕೊಳ್ಳುವನು. ಇವುಗಳನ್ನು ಒಂದು ದಿವಸದಲ್ಲಿ ಸಾಧಿಸಲು ಸಾಧ್ಯವಾಗುವುದಿಲ್ಲ. ಹೀಗೆ ಪ್ರತಿದಿನ ಮುಂದುವರಿಸು, ಖಂಡಿತವಾಗಿ ಅವನಿಂದ ಉತ್ತರ ಪಡೆಯುವೆ ಮತ್ತು ನಿನ್ನ ಹೃದಯ ಆನಂದದಿಂದ ತುಂಬಿ ಹೋಗುವುದು."

ಸಂಗ್ರಹ: *ಸ್ವಾಮಿ ರಾಘವೇಶಾನಂದ* (ಜನವರಿ ೪– ಸ್ವಾಮಿ ಶಿವಾನಂದರ ಜನ್ಮದಿನ)